# ಕೃಷ್ಣ ವರ್ಣದ ಆಭರಣ



**ಕಪ್ಪು ನೂಲಿನಲ್ಲಿ ಚಿನ್ನದ ಮಣಿಗಳನ್ನು ಪೋಣಿಸಿ ಮಾಡುವ ವೈವಿಧ್ಯಮಯ ಆಭರಣಗಳು ಫ್ಯಾಷನ್ ಟ್ರೆಂಡ್ ಸೃಷ್ಟಿಸಿವೆ. ಸಾಂಪ್ರದಾಯಿಕತೆಗೂ, ಆಧುನಿಕತೆಗೂ ಸೈ ಎನಿಸುವ ಇಂಥ ಆಭರಣಗಳು ನಟಿ, ರೂಪದರ್ಶಿಯರಿಂದ ಹಿಡಿದು ಎಲ್ಲ ವರ್ಗದವರನ್ನು ಸೆಳೆಯುವ ಕೃಷ್ಣ ವರ್ಣದ ಆಭರಣ ಕ್ರೇಜ್ ಹುಟ್ಟಿಸಿದೆ.**

**ಕೃಷ್ಣವೇಣಿ ಪ್ರಸಾದ್ ಮುಳಿಯ**
ಚಿತ್ರಗಳು: ಮುಳಿಯ ಕೇಶವ ಭಟ್ & ಸನ್ಸ್

ಕಪ್ಪು ಮಣಿ ದೃಷ್ಟಿ ನಿವಾರಿಸುವ, ನಕಾರಾತ್ಮಕ ಶಕ್ತಿಯನ್ನು ಓಡಿಸುವ ಶಕ್ತಿ ಇರುವ ಹಾರ. ಇದಕ್ಕಾಗಿಯೇ ಕರಿಮಣಿ, ಕಂಠಿಗೆ ಅಷ್ಟೊಂದು ಮಹತ್ವ. ಮಕ್ಕಳಿಗೆ ಕಪ್ಪು ಮಣಿ ಹಾರ ಹಾಕಿದರೆ ಒಳ್ಳೆಯದು, ಆರೋಗ್ಯಕ್ಕೆ ಪೂರಕವಾಗಿರುತ್ತದೆ ಎಂಬ ನಂಬಿಕೆ ಇದೆ. ಕರಿ ಹರಳು, ಕಪ್ಪು ನೂಲನ್ನು ವಿಧ ವಿಧ ವಿನ್ಯಾಸದಲ್ಲಿ ಹೆಣೆದು ಪೋಣಿಸಿ ಚಿನ್ನದೊಂದಿಗೆ ಬೆಸೆದು ಆಭರಣ ಮಾಡಿದಾಗ ಅದರ ಸೊಬಗು ಕಣ್ಮನ ಸೆಳೆಯುತ್ತದೆ. ಹಗುರವಾದ ಲೈಟ್ ವೈಟ್ ಆಭರಣಗಳು ಇವು.

## ಕಪ್ಪು ನೂಲಿನಲ್ಲಿ ನೆಕ್ಲೇಸ್

ದೇವಸ್ಥಾನದ ಮುಕುಟಗಳಲ್ಲಿ ಅಲಂಕರಿಸಿರುವ ಹಾರಕ್ಕೆ ವಿಶೇಷ ಶೋಭೆ ಇದೆ. ಇದೇ ತರದ ಶೋಭೆ ಈ ಹಾರಕ್ಕೆ ಇದೆ. ಮುಕುಟಗಳಲ್ಲಿ ಹೂವಿನ ವಿನ್ಯಾಸ, ಎಲೆ, ಗುಂಡುಗಳು, ಬಳ್ಳಿ ಈ ತರದ ಚಿತ್ರಗಳು ಎಂಬೋಸಿಂಗ್ (ಉಬ್ಬಿದ್ದು) ಆಗಿದ್ದು 3ಡಿ ಎಫೆಕ್ಟ್ ಇದೆ. ಬಹಳ ಸದೃಢವಾಗಿ ಹೆಣೆದಿದೆ. ಕಪ್ಪು ನೂಲು ಬೇಡ ಎಂದಾದವರು ಕೆಂಪು, ಹಳದಿ, ಪಿಂಕ್ ಇತರೆ ಬಣ್ಣದ ನೂಲನ್ನು ಆರಿಸಿಕೊಳ್ಳಬಹುದು. ಈ ವಿನ್ಯಾಸದ ನೆಕ್ಲೇಸ್‌ನ ಚಿನ್ನವನ್ನು ಆಕ್ಸಿಡೈಸ್ಡ್ ಫಿನಿಶಿಂಗ್, ರೆಡ್ ಗೋಲ್ಡ್ ಫಿನಿಶ್, ಹಳದಿ ಗೋಲ್ಡ್ ಫಿನಿಶ್ ಆಗಿಯೂ ವಿನ್ಯಾಸಗೊಳಿಸಿ ಧರಿಸಬಹುದು. ಆಕ್ಸಿಡೈಸ್ಡ್ ಆದರೆ ಟ್ರೈಬಲ್ ಜ್ಯುವೆಲ್ಲರಿ ನೋಟ ಇರುತ್ತದೆ. ಇದೊಂದು ಅದ್ಭುತ ನೋಟ ಕೊಡುತ್ತದೆ. ಕಾಟನ್ ಸೀರೆಗಳಿಗೆ, ಸಭೆ ಸಮಾರಂಭಗಳಿಗೆ ಸುಂದರವಾಗಿ ಕಾಣುತ್ತದೆ. ಇದು ಕಾಸ್ಟಿಂಗ್ ಜ್ಯುವೆಲ್ಲರಿಯೂ ಆಗಿದೆ. ಇದರ ಒಳಗೆ ಟೊಳ್ಳಾಗಿದ್ದರೂ

